# Library & Information Centre

## GIT NEWS

**Vijay Karnataka 05-05-2016**

ಕ್ಯಾಂಪಸ್ ಸಂದರ್ಶನದಲ್ಲಿ 750 ವಿದ್ಯಾರ್ಥಿಗಳ ಆಯ್ಕೆ

# ಜಿಐಟಿಯಿಂದ ಮಹತ್ವದ ಸಾಧನೆ

■ ವಿಕ ಸುದ್ದಿಲೋಕ ಬೆಳಗಾವಿ

ಪ್ರಸಕ್ತ ವರ್ಷ ಬಹುರಾಷ್ಟ್ರೀಯ ಕಂಪನಿಗಳು ನಡೆಸಿದ ಕ್ಯಾಂಪಸ್ ಸಂದರ್ಶನದಲ್ಲಿ ಇಲ್ಲಿನ ಕರ್ನಾಟಕ ಕಾನೂನು ಸಂಸ್ಥೆಯ (ಕೆಎಲ್ಎಸ್) ಗೋಗಟೆ ತಾಂತ್ರಿಕ ಕಾಲೇಜಿನ ಎಂಜಿನಿಯರಿಂಗ್ ವಿಭಾಗದ ಅಂತಿಮ ವರ್ಷದ 750ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಕಾಲೇಜಿನ ಪ್ರಾಚಾರ್ಯ ಎ.ಎಸ್. ದೇಶಪಾಂಡೆ ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಪ್ರಸಕ್ತ ವರ್ಷ ಅತಿ ಹೆಚ್ಚು ವಿದ್ಯಾರ್ಥಿಗಳು ಎಂಜಿನಿಯರಿಂಗ್ ಪದವಿ ಮುಗಿಸುವ ಮೊದಲೇ ಉದ್ಯೋಗಕ್ಕೆ ಅರ್ಹತೆ ಗಿಟ್ಟಿಸಿಕೊಳ್ಳುವ ಮೂಲಕ ಕಾಲೇಜಿನ ಹೊಸದೊಂದು ಮೈಲುಗಲ್ಲಿಗೆ ಸಾಕ್ಷಿಯಾಗಿದ್ದಾರೆ ಎಂದು ಹೇಳಿದರು.

ಪ್ರಸಿದ್ಧ 65 ಬಹುರಾಷ್ಟ್ರೀಯ ಕಂಪನಿಗಳು ಕ್ಯಾಂಪಸ್ ಸಂದರ್ಶನ ನಡೆಸಿದ್ದವು. ಅದರಲ್ಲಿ ಜಿಐಟಿ ಕಾಲೇಜಿನ ವಿದ್ಯಾರ್ಥಿಗಳು ಉನ್ನತ ಶ್ರೇಣಿ ಮತ್ತು ಸ್ವಂತ ಪ್ರತಿಭೆಯ ಮೂಲಕ ಕಂಪನಿಗಳ ಮುಖ್ಯಸ್ಥರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಈ ವಿದ್ಯಾರ್ಥಿಗಳ ಮಾಸಿಕ ವೇತನ 4.5 ಲಕ್ಷದಿಂದ 10 ಲಕ್ಷ ರೂ.ವರೆಗೆ ಇರಲಿದೆ ಎಂದರು.

ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕೌಶಲ ವೃದ್ಧಿಸಿಕೊಳ್ಳಲು ಅನುಕೂಲ ಆಗುವಂತೆ ಶೈಕ್ಷಣಿಕ ಅವಧಿಯ ಎರಡನೇ ವರ್ಷದಲ್ಲಿಯೇ ತರಬೇತಿ ಆರಂಭಿಸಲಾಗುತ್ತದೆ. ಇದರಲ್ಲಿ ತಾಂತ್ರಿಕ ಕೌಶಲ ಮತ್ತು ಸಾಮಾನ್ಯ ಜ್ಞಾನಕ್ಕೆ ಹೆಚ್ಚು ಒತ್ತು ನೀಡಲಾಗುತ್ತದೆ. ಇಂಗ್ಲಿಷ್ ತರಬೇತಿ ಜತೆಗೆ ನಾಯಕತ್ವ ಗುಣಗಳನ್ನು ಬೆಳೆಸಲು ಸಾಂಸ್ಕೃತಿಕ ಸ್ಪರ್ಧೆಗಳನ್ನು ಸಹ ಏರ್ಪಡಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಪ್ರತಿ ವರ್ಷದಂತೆ ಈ ವರ್ಷವೂ ಗೋಗಟೆ ಕಾಲೇಜು ಸಾಕಷ್ಟು ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಏಷಿಯನ್ ಎಜ್ಯುಕೇಶನ್ ಲೀಡರ್‌ಶಿಪ್ ಹಾಗೂ ಡಾಟಾ ಕ್ವೆಸ್ಟ್ ಟಿ-ಸ್ಕೂಲ್ ಎನ್ನುವ ಅತಿ ಮಹತ್ವದ ಅವಾರ್ಡ್‌ಗಳನ್ನು ಕಾಲೇಜು ಗಿಟ್ಟಿಸಿಕೊಂಡಿದೆ. ಸಿಎಸ್‌ಆರ್ ಪತ್ರಿಕೆಯಿಂದ ಟಾಪ್ ಟಿ-ಸ್ಕೂಲ್ ಇನ್ ಇಂಡಿಯಾ ಪ್ರಶಸ್ತಿ ಹಾಗೂ ಶೈಕ್ಷಣಿಕ, ಕೈಗಾರಿಕೆ ಕ್ಷೇತ್ರಗಳ ನಡುವೆ ಉತ್ತಮ ಬಾಂಧವ್ಯ ಹೊಂದಿರುವುದಕ್ಕಾಗಿ ಡಿಎನ್‌ಎ ಪತ್ರಿಕೆಯಿಂದಲೂ ಪ್ರಶಸ್ತಿ ಸಿಕ್ಕಿದೆ ಎಂದರು.

ಜಪಾನಿನ ಅಂತಾರಾಷ್ಟ್ರೀಯ ಕಾರ್ಪೊರೇಶನ್, ಸಿಐಐ ಮತ್ತು ಬಿಐಫ್‌ಸಿ ಜತೆಗೆ ಶೈಕ್ಷಣಿಕ ಹಾಗೂ ಕೈಗಾರಿಕಾ ಕ್ಷೇತ್ರಗಳ ನಡುವಿನ ಬಾಂಧವ್ಯಕ್ಕಾಗಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಅಲ್ಲದೆ ವಿದ್ಯಾರ್ಥಿಗಳಿಗೆ ಉತ್ತಮ ತರಬೇತಿ ನೀಡಲು ವಿಎಲ್‌ಎಂಐ (ವಿಜನರಿ ಲಘು ಉದ್ಯೋಗ ಮಿತ್ರ ಮಂಡಳಿ) ಶಾಖೆಯನ್ನು ಕಾಲೇಜಿನಲ್ಲಿ ಆರಂಭಿಸಲಾಗಿದೆ. ಇದು ದಕ್ಷಿಣ ಭಾರತದ ಮೊದಲ ಮತ್ತು ಏಕೈಕ ಶಾಖೆ ಎಂದು ಅವರು ವಿವರಿಸಿದರು.

ಕಾಲೇಜು ಚೇರ್ಮನ್ ಯು.ಎನ್. ಕಾಲಕುಂದ್ರಿಕರ, ಪ್ರೊ. ಸಂಜಯ ದೇಶಪಾಂಡೆ ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಜಿಐಟಿ ಕಾಲೇಜು ಪ್ರಾಚಾರ್ಯ ಎ.ಎಸ್. ದೇಶಪಾಂಡೆ.

### ಹೊಸ ಎಂಟೆಕ್ ಕೋರ್ಸ್

ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಹೊಸದಾಗಿ ಎರಡು ಎಂಟೆಕ್ ಕೋರ್ಸ್‌ಗಳನ್ನು ಆರಂಭಿಸಲಾಗುತ್ತಿದೆ. ಇಂಡಸ್ಟ್ರಿಯಲ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಹಾಗೂ ಆಟೋಮೋಟಿವ್ ಎಲೆಕ್ಟ್ರಾನಿಕ್ ಎನ್ನುವ ಎಂಟೆಕ್ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪಿಜಿಸಿಟಿ ನಂತರ ಪ್ರವೇಶ ಶುರುವಾಗಲಿದೆ ಎಂದು ಪ್ರಾಚಾರ್ಯ ಎ.ಎಸ್. ದೇಶಪಾಂಡೆ ತಿಳಿಸಿದರು.

ಗೋಗಟೆ ಕಾಲೇಜಿನ ಎಂಜಿನಿಯರಿಂಗ್ ವಿಭಾಗದಲ್ಲಿ ವಿಟಿಯು ಪಠ್ಯಕ್ರಮ ಅನುಸರಿಸುತ್ತಿಲ್ಲ, ಕಾಲೇಜಿನಿಂದಲೇ ಪಠ್ಯಕ್ರಮ ರೂಪಿಸಲಾಗುತ್ತದೆ. ತಾಂತ್ರಿಕ ಕೌಶಲ, ಸಂವಹನ ಸಾಮರ್ಥ್ಯ ಮತ್ತು ಸಾಮಾನ್ಯ ಜ್ಞಾನ ವೃದ್ಧಿಗೆ ಪಠ್ಯಕ್ರಮದಲ್ಲಿ ಹೆಚ್ಚು ಒತ್ತು ನೀಡಲಾಗುತ್ತದೆ.

- ಯು.ಎನ್. ಕಾಲಕುಂದ್ರಿಕರ, ಚೇರ್ಮನ್

# Library & Information Centre

**Kannada Prabha 05-05-2016**

## ಜಿಐಟಿಯಲ್ಲಿ ಹೊಸ ಸ್ನಾತಕೋತ್ತರ ಕೋರ್ಸ್

### ಜಿಐಟಿ ಕಾಲೇಜು ಪ್ರಾಚಾರ್ಯ ಡಾ. ಆನಂದ ದೇಶಪಾಂಡೆ ಮಾಹಿತಿ

• **ಕನ್ನಡಪ್ರಭ ವಾರ್ತೆ** ಬೆಳಗಾವಿ

ಕರ್ನಾಟಕ ಕಾನೂನು ಸಂಸ್ಥೆಯ ಗೋಗಟೆ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಇಂಡಸ್ಟ್ರೀಯಲ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಮತ್ತು ಆಟೋಮೋಟಿವ್ ಎಲೆಕ್ಟ್ರಾನಿಕ್ಸ್ ಎಂಬ ಎರಡು ಹೊಸ ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸಲಾಗುತ್ತಿದೆ ಎಂದು ಕಾಲೇಜು ಪ್ರಾಚಾರ್ಯ ಡಾ. ಆನಂದ ದೇಶಪಾಂಡೆ ತಿಳಿಸಿದ್ದಾರೆ.

ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾಯತ್ತ ಮಹಾವಿದ್ಯಾಲಯವಾದ ನಮ್ಮ ಸಂಸ್ಥೆಯು ತಾಂತ್ರಿಕ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಬೆಳವಣಿಗೆಯನ್ನು ಕಂಡಿದೆ. ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಾಗೂ ಔದ್ಯೋಗಿಕವಾಗಿ ಸಾಧನೆಯನ್ನು ಮಾಡುತ್ತಿದೆ ಎಂದರು.

> ವಿದ್ಯಾರ್ಥಿಗಳ ಕಠಿಣ ಪರಿಶ್ರಮದ ಜೊತೆಗೆ ಸಂಸ್ಥೆಯು ವಿದ್ಯಾರ್ಥಿಗಳನ್ನು ಈ ನಿಟ್ಟಿನಲ್ಲಿ ತಯಾರಿ ಮಾಡಲು ಎರಡನೇ ವರ್ಷದಿಂದಲೇ ತಾಂತ್ರಿಕ ಕೌಶಲಗಳ ಬಗ್ಗೆ ಹಾಗೂ ಸಾಮಾನ್ಯ ಜ್ಞಾನದ ಬಗ್ಗೆ ತರಬೇತಿ ಕೊಡುತ್ತದೆ. ಅಲ್ಲದೇ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗಾಗಿ ವಿಶೇಷವಾಗಿ ಇಂಗ್ಲಿಷ್ ಭಾಷೆಯ ತರಬೇತಿ ನೀಡಲಾಗುತ್ತಿದೆ.
>
> • **ಡಾ. ಆನಂದ ದೇಶಪಾಂಡೆ** ಜಿಐಟಿ ಕಾಲೇಜು ಪ್ರಾಚಾರ್ಯ

ಕಾಲೇಜಿನ ಕೊನೆಯ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳಲ್ಲಿ ಸುಮಾರು 750 ವಿದ್ಯಾರ್ಥಿಗಳು ವಿವಿಧ ಬಹುರಾಷ್ಟ್ರೀಯ ಕಂಪನಿಗಳು ನಡೆಸಿರುವ ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಯಾಗಿದ್ದಾರೆ. ವಿವಿಧ ಕಂಪನಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ವಿದ್ಯಾರ್ಥಿಗಳು ವರ್ಷಕ್ಕೆ ₹4.5 ಲಕ್ಷದಿಂದ ₹10 ಲಕ್ಷವರೆಗೆ ಸಂಬಳ ಪಡೆಯುತ್ತಿದ್ದಾರೆ. ವಿದ್ಯಾರ್ಥಿಗಳ ಕಠಿಣ ಪರಿಶ್ರಮದ ಜೊತೆಗೆ ಸಂಸ್ಥೆಯು ವಿದ್ಯಾರ್ಥಿಗಳನ್ನು ಈ ನಿಟ್ಟಿನಲ್ಲಿ ತಯಾರಿ ಮಾಡಲು ಎರಡನೇ ವರ್ಷದಿಂದಲೇ ತಾಂತ್ರಿಕ ಕೌಶಲಗಳ ಬಗ್ಗೆ ಹಾಗೂ ಸಾಮಾನ್ಯ ಜ್ಞಾನದ ಬಗ್ಗೆ ತರಬೇತಿ ಕೊಡುತ್ತದೆ. ಅಲ್ಲದೇ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗಾಗಿ ವಿಶೇಷವಾಗಿ ಇಂಗ್ಲಿಷ್ ಭಾಷೆಯ ತರಬೇತಿ ನೀಡಲಾಗುತ್ತಿದೆ ಎಂದು ಹೇಳಿದರು. ಈ ಬಾರಿ ಕಾಲೇಜಿಗೆ ಹಲವಾರು ಪ್ರಶಸ್ತಿಗಳು ಲಭಿಸಿವೆ ಎಂದು ಹೇಳಿದರು.

# Library & Information Centre

**Vishwa Vani 05-05-2016**

## ಜಿಐಟಿಯಲ್ಲಿ ನೂತನ ಕೋರ್ಸ್

**ವಿಶ್ವವಾಣಿ ಸುದ್ದಿಮನೆ** ಬೆಳಗಾವಿ

ನಗರದ ಕೆಎಲ್‌ಎಸ್ ಗೋಗಟೆ ತಾಂತ್ರಿಕ ಮಹಾವಿದ್ಯಾಲಯ(ಜಿಐಟಿ) ಈ ವರ್ಷದಿಂದ ಇಂಡಸ್ಟ್ರಿಯಲ್ ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್ ಮತ್ತು ಆಟೋಮೋಟಿವ್ ಎಲೆಕ್ಟ್ರಾನಿಕ್ಸ್ ಎಂಬ ವಿನೂತನ ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸುತ್ತಿದೆ.

ಬುಧವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಆನಂದ ದೇಶಪಾಂಡೆ ಮಾಹಿತಿ ನೀಡಿದರು.

ಕಳೆದ ವರ್ಷದಿಂದ ಸ್ವಾಯತ್ತ ಸಂಸ್ಥೆಯ ಸ್ಥಾನಮಾನ ಪಡೆದ ನಂತರ ತಾಂತ್ರಿಕ ಮತ್ತು ಕೈಗಾರಿಕಾ ಕ್ಷೇತ್ರಗಳ ಬೆಳವಣಿಗೆ ಕಂಡು ಈ ಕೋರ್ಸ್ ಆರಂಭ ಮಾಡಲಾಗುತ್ತಿದೆ. ಮುಂದಿನ ವರ್ಷವೂ ಇನ್ನೂ ಹೆಚ್ಚಿನ ಕ್ಷೇತ್ರಗಳಲ್ಲಿ, ಶೈಕ್ಷಣಿಕ, ಸಾಮಾಜಿಕ ಮತ್ತು ಔದ್ಯೋಗಿಕವಾಗಿ ಸಾಧನೆ ಮಾಡಲು ಪ್ರಯತ್ನಿಸಲಿದೆ ಎಂದರು.

ಮಹಾವಿದ್ಯಾಲಯ ಪ್ರತಿ ವರ್ಷ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡುತ್ತಿದೆ. ಅಂತಿಮ ವರ್ಷದ ಎಂಜಿನಿಯರಿಂಗ್ ಓದುತ್ತಿರುವ ವಿದ್ಯಾರ್ಥಿಗಳಲ್ಲಿ 750ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಬಹುರಾಷ್ಟ್ರೀಯ ಕಂಪನಿಗಳು ನಡೆಸಿರುವ ಕ್ಯಾಂಪಸ್ ಸಂದರ್ಶನಕ್ಕೆ ಆಯ್ಕೆಯಾಗಿದ್ದಾರೆ. ಸಂದರ್ಶನಕ್ಕೆ ಬಂದ ಕಂಪನಿಗಳೆಲ್ಲ ಜಿಐಟಿ ವಿದ್ಯಾರ್ಥಿಗಳ ಉನ್ನತ ಶ್ರೇಣಿ ಮತ್ತು ಪ್ರತಿಭೆ ಕಂಡು ಮೆಚ್ಚಿಕೊಂಡು ಪ್ರಶಂಸನೀಯವಾದ ಮಾತುಗಳನ್ನು ಆಡಿರುವುದು ಸಂಸ್ಥೆಯ ಶೈಕ್ಷಣಿಕ ಗುಣಮಟ್ಟಕ್ಕೆ ಸಾಕ್ಷಿಯಾಗಿದೆ ಎಂದರು.

ಈ ಕಂಪನಿಗಳಿಗೆ ಆಯ್ಕೆಯಾದ ಪ್ರತಿ ವಿದ್ಯಾರ್ಥಿಯ ಸಂಬಳ ಪ್ರತಿ ವರ್ಷಕ್ಕೆ 4.5 ಲಕ್ಷದಿಂದ 10 ಲಕ್ಷದವರೆಗೆ ಇದೆ. ಇದು ವಿದ್ಯಾರ್ಥಿಗಳ ಕಠಿಣ ಪರಿಶ್ರಮಕ್ಕೆ ನಿದರ್ಶನವಾಗಿದೆ. ಸಂಸ್ಥೆಯು ವಿದ್ಯಾರ್ಥಿಗಳನ್ನು ಶ್ರೇಷ್ಠ ವಿದ್ಯಾರ್ಥಿಗಳನ್ನಾಗಿ ತಯಾರಿ ಮಾಡಲು ಎರಡನೇ ವರ್ಷದಿಂದಲೇ ತಾಂತ್ರಿಕ ಕೌಶಲ ಹಾಗೂ ಸಾಮಾನ್ಯ ಜ್ಞಾನದ ಬಗ್ಗೆ ತರಬೇತಿಯನ್ನು ಕೊಡುತ್ತಿದೆ. ಹಳ್ಳಿಭಾಗದ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಇಂಗ್ಲಿಷ್ ಭಾಷೆಯ ತರಬೇತಿಯನ್ನು ಕೊಡುತ್ತಿದೆ. ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣವನ್ನು ಬೆಳೆಸಲು ಮತ್ತು ಗುಂಪಿನಲ್ಲಿ ಬೆರೆತು ಕೆಲಸ ಮಾಡುವುದನ್ನು ಕಲಿಯಲು ತಾಂತ್ರಿಕತೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಇಟ್ಟುಕೊಳ್ಳುತ್ತಿದೆ ಎಂದರು.

ಈ ವರ್ಷ ಜಿಐಟಿಗೆ ಹಲವು ಪ್ರಶಸ್ತಿಗಳು ಲಭಿಸಿವೆ. ಮುಂಬೈನಲ್ಲಿ ಏಷ್ಯನ್ ಎಜುಕೇಶನ್ ಲೀಡರ್‌ಶಿಪ್ ಅವಾರ್ಡ್, ಡೇಟಾ ಕ್ವೆಸ್ಟ್ ಟಿ-ಸ್ಕೂಲ್ ಅವಾರ್ಡ್, ಸಿಎಸ್‌ಆರ್ ಪತ್ರಿಕೆ ವತಿಯಿಂದ ಟಾಪ್ ಟಿ-ಸ್ಕೂಲ್ ಇನ್ ಇಂಡಿಯಾ ಮತ್ತು ಶೈಕ್ಷಣಿಕ ಮತ್ತು ಕೈಗಾರಿಕಾ ಕ್ಷೇತ್ರಗಳ ನಡುವೆ ಉತ್ತಮ ಬಾಂಧವ್ಯ ಹೊಂದಿರುವುದಕ್ಕಾಗಿ ಡಿಎನ್‌ಎ ಪತ್ರಿಕೆಯಿಂದ ಪ್ರಶಸ್ತಿ, ಜಪಾನಿನ ಅಂತಾರಾಷ್ಟ್ರೀಯ ಕಾರ್ಪೋರೇಶನ್, ಸಿಐಐ ಮತ್ತು ಬಿಎಫ್‌ಸಿ ಜೊತೆಗ ಶೈಕ್ಷಣಿಕ ಮತ್ತು ಕೈಗಾರಿಕಾ ಕ್ಷೇತ್ರಗಳ ನಡುವೆ ಉತ್ತಮ ಬಾಂಧವ್ಯಕ್ಕೆ ಐತಿಹಾಸಿಕ ಒಪ್ಪಂದ ಮಾಡಿಕೊಂಡಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ತರಬೇತಿ ನೀಡಲು ವಿಜನರಿ ಲಘು ಉದ್ಯೋಗ್ ಮಿತ್ರಾ ಮಂಡಲ(ವಿಎಲ್‌ಎಂಐ)ದ ಬೆಳಗಾವಿ ಶಾಖೆಯನ್ನು ಮಹಾವಿದ್ಯಾಲಯದಲ್ಲಿ ಆರಂಭಿಸಲಾಗಿದೆ. ಇದು ದಕ್ಷಿಣ ಭಾರತದ ಏಕೈಕ ಶಾಖೆಯಾಗಿದ್ದು, ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಕನಸುಗಳನ್ನೇ ಉದ್ದೇಶಗಳನ್ನಾಗಿ ಹೊಂದಿದೆ ಎಂದರು. ಉದಯ ಕಾಲಕುಂದ್ರಿಕರ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# LIBRARY & INFORMATION CENTRE

**Kannadamma 05-05-2016**

## ಜಿಐಟಿಯಲ್ಲಿ ಸ್ನಾತಕೋತ್ತರ ಕೋರ್ಸ್‌ಗಳು ಆರಂಭ: ಡಾ.ದೇಶಪಾಂಡೆ




ಬೆಳಗಾವಿ:4 ನಗರದ ಕೆಎಲ್ಎಸ್ ಗೋಗಟೆ ತಾಂತ್ರಿಕ ಮಹಾವಿದ್ಯಾಲಯ(ಜಿಐಟಿ) ಈ ವರ್ಷದಿಂದ ಇಂಡಸ್ಟ್ರಿಯಲ್ ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್ ಮತ್ತು ಆಟೋಮೆಟಿವ್ ಎಲೆಕ್ಟ್ರಾನಿಕ್ಸ್ ಎಂಬ ವಿನೂತನ ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸುತ್ತಿದೆ.

ಬುಧವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಆನಂದ ದೇಶಪಾಂಡೆ ಮಾಹಿತಿ ನೀಡಿದರು.

ಕಳೆದ ವರ್ಷದಿಂದ ಸ್ವಾಯತ್ತ ಸಂಸ್ಥೆಯ ಸ್ಥಾನಮಾನ ಪಡೆದ ನಂತರ ತಾಂತ್ರಿಕ ಮತ್ತು ಕೈಗಾರಿಕಾ ಕ್ಷೇತ್ರಗಳ ಬೆಳವಣಿಗೆ ಕಂಡು ಈ ಕೋರ್ಸ್ ಆರಂಭ ಮಾಡಲಾಗುತ್ತಿದೆ. ಮುಂದಿನ ವರ್ಷವೂ ಇನ್ನೂ ಹೆಚ್ಚಿನ ಕ್ಷೇತ್ರಗಳಲ್ಲಿ ಶೈಕ್ಷಣಿಕ, ಸಾಮಾಜಿಕ ಮತ್ತು ಔದ್ಯೋಗಿಕವಾಗಿ ಸಾಧನೆ ಮಾಡಲು ಪ್ರಯತ್ನಿಸಲಿದೆ ಎಂದರು.

ಮಹಾವಿದ್ಯಾಲಯ ಪ್ರತಿವರ್ಷ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡುತ್ತಿದೆ. ಅಂತಿಮ ವರ್ಷದ ಎಂಜಿನಿಯರಿಂಗ್ ಓದುತ್ತಿರುವ ವಿದ್ಯಾರ್ಥಿಗಳಲ್ಲಿ 750 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಬಹುರಾಷ್ಟ್ರೀಯ ಕಂಪನಿಗಳು ನಡೆಸಿರುವ ಕ್ಯಾಂಪಸ್ ಸಂದರ್ಶನಕ್ಕೆ ಆಯ್ಕೆಯಾಗಿದ್ದಾರೆ. ಸಂದರ್ಶನಕ್ಕೆ ಬಂದ ಕಂಪನಿಗಳೆಲ್ಲ ಜಿಐಟಿ ವಿದ್ಯಾರ್ಥಿಗಳ ಉನ್ನತ ಶ್ರೇಣಿ ಮತ್ತು ಪ್ರತಿಭೆ ಕಂಡು ಮೆಚ್ಚಿಕೊಂಡು ಪ್ರಶಂಸನೀಯವಾದ ಮಾತುಗಳನ್ನು ಆಡಿರುವುದು ಸಂಸ್ಥೆಯ ಶೈಕ್ಷಣಿಕ ಗುಣಮಟ್ಟಕ್ಕೆ ಸಾಕ್ಷಿಯಾಗಿದೆ ಎಂದರು.

ಈ ಕಂಪನಿಗಳಿಗೆ ಆಯ್ಕೆಯಾದ ಪ್ರತಿ ವಿದ್ಯಾರ್ಥಿಯ ಸಂಬಳ ಪ್ರತಿ ವರ್ಷಕ್ಕೆ 4.5 ಲಕ್ಷದಿಂದ 10 ಲಕ್ಷದವರೆಗೆ ಇದೆ. ಇದು ವಿದ್ಯಾರ್ಥಿಗಳ ಕಠಿಣ ಪರಿಶ್ರಮಕ್ಕೆ ನಿದರ್ಶನವಾಗಿದೆ. ಸಂಸ್ಥೆಯು ವಿದ್ಯಾರ್ಥಿಗಳನ್ನು ಶ್ರೇಷ್ಠ ವಿದ್ಯಾರ್ಥಿಗಳನ್ನಾಗಿ ತಯಾರಿ ಮಾಡಲು ಎರಡನೇ ವರ್ಷದಿಂದಲೇ ತಾಂತ್ರಿಕ ಕೌಶಲ್ಯ ಹಾಗೂ ಸಾಮಾನ್ಯ ಜ್ಞಾನದ ಬಗ್ಗೆ ತರಬೇತಿಯನ್ನು ಕೊಡುತ್ತಿದೆ. ಹಳ್ಳಿಭಾಗದ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಇಂಗ್ಲಿಷ್ ಭಾಷೆಯ ತರಬೇತಿಯನ್ನು ಕೊಡುತ್ತಿದೆ. ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣವನ್ನು ಬೆಳೆಸಲು ಮತ್ತು ಗುಂಪಿನಲ್ಲಿ ಬೆರೆತು ಕೆಲಸ ಮಾಡುವುದನ್ನು ಕಲಿಯಲು ತಾಂತ್ರಿಕತೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಇಟ್ಟುಕೊಳ್ಳುತ್ತಿದೆ ಎಂದರು.ಈ ವರ್ಷ ಜಿಐಟಿಗೆ ಹಲವು ಪ್ರಶಸ್ತಿಗಳು ಲಭಿಸಿವೆ. ದುಬೈನಲ್ಲಿ ಏಷ್ಯನ್ ಎಜುಕೇಶನ್ ಲೀಡರ್‌ಶಿಪ್ ಅವಾರ್ಡ್, ಡೇಟಾ ಕ್ವೆಸ್ಟ್ ಟಿ-ಸ್ಕೂಲ್ ಅವಾರ್ಡ್, ಸಿಎಸ್ಆರ್ ಪತ್ರಿಕೆ ವತಿಯಿಂದ ಟಾಪ್ ಟಿ-ಸ್ಕೂಲ್ ಇನ್ ಇಂಡಿಯಾ ಮತ್ತು ಶೈಕ್ಷಣಿಕ ಮತ್ತು ಕೈಗಾರಿಕಾ ಕ್ಷೇತ್ರಗಳ ನಡುವೆ ಉತ್ತಮ ಬಾಂಧವ್ಯ ಹೊಂದಿರುವುದಕ್ಕಾಗಿ ಡಿಎನ್ಎ ಪತ್ರಿಕೆಯಿಂದ ಪ್ರಶಸ್ತಿ, ಜಪಾನಿನ ಅಂತಾರಾಷ್ಟ್ರೀಯ ಕಾರ್ಪೋರೇಶನ್, ಸಿಐಐ ಮತ್ತು ಬಿಎಫ್‌ಸಿ ಜೊತೆಗ ಶೈಕ್ಷಣಿಕ ಮತ್ತು ಕೈಗಾರಿಕಾ ಕ್ಷೇತ್ರಗಳ ನಡುವೆ ಉತ್ತಮ ಬಾಂಧವ್ಯಕ್ಕೆ ಐತಿಹಾಸಿಕ ಒಪ್ಪಂದ ಮಾಡಿಕೊಂಡಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ತರಬೇತಿ ನೀಡಲು ವಿಜನರಿ ಲಘು ಉದ್ಯೋಗ್ ಮಿತ್ರಾ ಮಂಡಲ(ವಿಎಲ್ಎಂಎದ ಬೆಳಗಾವಿ ಶಾಖೆಯನ್ನು ಮಹಾವಿದ್ಯಾಲಯದಲ್ಲಿ ಆರಂಭಿಸಲಾಗಿದೆ. ಇದು ದಕ್ಷಿಣ ಭಾರತದ ಏಕೈಕ ಶಾಖೆಯಾಗಿದ್ದು, ಮಾಜಿ ರಾಷ್ಟ್ರಪತಿ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಕನಸುಗಳನ್ನೇ ಉದ್ದೇಶಗಳನ್ನಾಗಿ ಹೊಂದಿದೆ ಎಂದರು. ಉದಯ ಕಾಲಕುಂದ್ರಿಕರ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# Library & Information Centre

**Vijay Vani 05-05-2016**

## 750 ವಿದ್ಯಾರ್ಥಿಗಳು ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆ

### ಗೋಗಟೆ ತಾಂತ್ರಿಕ ಕಾಲೇಜು ಪ್ರಾಚಾರ್ಯ ಡಾ.ಆನಂದ ದೇಶಪಾಂಡೆ ಮಾಹಿತಿ

**ಬೆಳಗಾವಿ:** ಗೋಗಟೆ ತಾಂತ್ರಿಕ ಸಂಸ್ಥೆ (ಜಿಐಟಿ)ಯಲ್ಲಿ ಕೊನೆಯ ವರ್ಷದ ಇಂಜಿನಿಯರಿಂಗ್ ಓದುತ್ತಿರುವ 750 ವಿದ್ಯಾರ್ಥಿಗಳು ವಿವಿಧ ಬಹುರಾಷ್ಟ್ರೀಯ ಕಂಪನಿಗಳು ನಡೆಸಿರುವ ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಯಾಗಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಸಂಸ್ಥೆಯ ಪ್ರಾಚಾರ್ಯ ಡಾ.ಆನಂದ ದೇಶಪಾಂಡೆ, ವಿವಿಧ ಕಂಪನಿಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳು ವರ್ಷಕ್ಕೆ 4.5 ಲಕ್ಷದಿಂದ 10 ಲಕ ರೂ.ವರೆಗೆ ಸಂಬಳ ಪಡೆಯುತ್ತಿದ್ದಾರೆ. ವಿದ್ಯಾರ್ಥಿಗಳು ಆಯ್ಕೆಯಾಗಲು ಪೂರಕವಾದ ವಾತಾವರಣ ನಿರ್ಮಿಸಲು ಸಂಸ್ಥೆಯು ಇಂಜಿನಿಯರಿಂಗ್ ಕೋರ್ಸ್‌ನ ಎರಡನೇ ವರ್ಷದಿಂದಲೇ ತಾಂತ್ರಿಕ ಕೌಶಲಗಳ ಬಗ್ಗೆ ತರಬೇತಿ ನೀಡುತ್ತದೆ. ಅದರಲ್ಲೂ ಹಳ್ಳಿ ಭಾಗದ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಇಂಗ್ಲಿಷ್ ಭಾಷೆ, ಸಂವಹನ ಕೌಶಲ, ನಾಯಕತ್ವ ಗುಣಗಳ ಬಗ್ಗೆ ತರಬೇತಿ ನೀಡಲಾಗುತ್ತದೆ ಎಂದು ಹೇಳಿದರು.

**ಸ್ನಾತಕೋತ್ತರ ಕೋರ್ಸ್:** ಕಳೆದ ವರ್ಷದಿಂದ ಸ್ವಾಯತ್ತ ಸಂಸ್ಥೆಯಾಗಿರುವ ಗೋಗಟೆ ತಾಂತ್ರಿಕ ಸಂಸ್ಥೆಯಲ್ಲಿ ಈ ವರ್ಷದಿಂದ ಇಂಡಸ್ಟ್ರಿಯಲ್ ಇಂಜಿನಿಯರಿಂಗ್ ಮತ್ತು ಮ್ಯಾನೇಜಮೆಂಟ್ ಹಾಗೂ ಆಟೋಮೇಟಿವ್ ಇಲೆಕ್ಟ್ರಾನಿಕ್ಸ್ ಎಂಬ ವಿನೂತನ ಸ್ನಾತಕೋತ್ತರ ಕೋರ್ಸ್ ಆರಂಭಿಸಲಾಗುತ್ತಿದೆ ಎಂದರು.

ದುಬೈನಲ್ಲಿ ಏಷ್ಯನ್ ಎಜುಕೇಶನ್ ಲೀಡರ್‌ಶಿಪ್ ಅವಾರ್ಡ್, ಡಾಟಾ ಕ್ವೆಸ್ಟ್ ಟಿ-ಸ್ಕೂಲ್ ಅವಾರ್ಡ್, ಸಿಎಸ್ ಆರ್ ಪತ್ರಿಕೆ ವತಿಯಿಂದ ಟಾಪ್ ಟಿ-ಸ್ಕೂಲ್ ಇನ್ ಇಂಡಿಯಾ ಮತ್ತಿತರ ಪ್ರಶಸ್ತಿಗಳು ಸಂಸ್ಥೆಗೆ ಲಭಿಸಿವೆ. ಶೈಕ್ಷಣಿಕ ಮತ್ತು ಕೈಗಾರಿಕಾ ಕ್ಷೇತ್ರಗಳ ನಡುವೆ ಉತ್ತಮ ಬಾಂಧವ್ಯಕ್ಕಾಗಿ ಜಪಾನಿನ ಅಂತಾರಾಷ್ಟ್ರೀಯ ಕಾರ್ಪೊರೇಶನ್, ಸಿಐಐ, ಬಿಎಫ್‌ಸಿ ಜತೆಗೆ ಐತಿಹಾಸಿಕ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದೇ ವೇಳೆ ವಿದ್ಯಾರ್ಥಿಳಿಗೆ ಇನ್ನೂ ಹೆಚ್ಚಿನ ತರಬೇತಿ ನೀಡುವುದಕ್ಕಾಗಿ ವಿಎಲ್‌ಎಂಐ-ವಿಷನರಿ ಲಘು ಉದ್ಯೋಗ ಮಿತ್ರ ಮಂಡಳವು ತನ್ನ ಶಾಖೆಯನ್ನು ಸಂಸ್ಥೆಯಲ್ಲಿ ಆರಂಭಿಸಿದೆ. ಇದು ದಕ್ಷಿಣ ಭಾರತದ ಏಕೈಕ ಶಾಖೆಯಾಗಿದೆ ಎಂದರು.

ಸಂಸ್ಥೆಯ ಚೇರ್ಮನ್ ಯು.ಎನ್.ಕಾಲಕುಂದ್ರಿಕರ, ಪ್ರೊ.ಸಂಜಯ ದೇಶಪಾಂಡೆ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

# Library & Information Centre

**Loka Darshan 05-05-2016**

## ಗೋಗಟೆ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಹೊಸ ಕೋರ್ಸ್‌ಗಳ ಆರಂಭ : ದೇಶಪಾಂಡೆ

ಬೆಳಗಾವಿ : ಪ್ರತಿಷ್ಠಿತ ಕೆಎಲ್‌ಎಸ್ ಸಂಸ್ಥೆಯ ಗೋಗಟೆ ತಾಂತ್ರಿಕ ಮಹಾವಿದ್ಯಾಲಯವು ಈ ವರ್ಷದಿಂದ ಇಂಡಸ್ಟ್ರಿಯಲ್ ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್ ಮತ್ತು ಆಟೋಮೇಟಿವ್ ಎಲೆಕ್ಟ್ರಾನಿಕ್ಸ್ ಎಂಬ ಹೊಸ ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸುತ್ತಿದೆ.

ಬುಧವಾರ ಪತ್ರಿಕಾ ಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಆನಂದ ದೇಶಪಾಂಡೆ ಅವರು, ಕಳೆದ ವರ್ಷದಿಂದ ಸ್ವಾಯತ್ತ ಸಂಸ್ಥೆಯ ಸ್ಥಾನಮಾನ ಪಡೆದ ನಂತರ ತಾಂತ್ರಿಕ ಮತ್ತು ಕೈಗಾರಿಕಾ ಕ್ಷೇತ್ರಗಳ ಬೆಳವಣಿಗೆ ಅಗತ್ಯವಿರುವ ಕೌಶಲ್ಯ ಹೊಂದಿರುವ ಶಿಕ್ಷಣ ನೀಡುವ ಬಗ್ಗೆ ನಿರ್ಧರಿಸಲಾಗಿತ್ತು. ಅದರಂತೆ ಈಗ ಮೂರು ಕೋರ್ಸುಗಳನ್ನು ಆರಂಭಿಸಲಾಗುತ್ತಿದೆ. ಇದು ಪ್ರಥಮ ಹೆಜ್ಜೆಯಾಗಿದ್ದು ಮುಂಬರುವ ವರ್ಷಗಳಲ್ಲಿ ಮಾರುಕಟ್ಟೆಗೆ ಅಗತ್ಯವಿರುವ ಶಿಕ್ಷಣವನ್ನು ನೀಡಿ ಯುವಕರಿಗೆ ಉದ್ಯೋಗ ದೊರಕಿಸಿ ಕೊಡಲಾಗುವದು ಎಂದರು.

ಅಂತಿಮ ವರ್ಷದ ಎಂಜಿನಿಯರಿಂಗ್ ಓದುತ್ತಿರುವ ಸುಮಾರು 750 ವಿದ್ಯಾರ್ಥಿಗಳು ವಿವಿಧ ಬಹುರಾಷ್ಟ್ರೀಯ ಕಂಪನಿಗಳು ನಡೆಸಿರುವ ಕ್ಯಾಂಪಸ್ ಸಂದರ್ಶನಕ್ಕೆ ಆಯ್ಕೆಯಾಗಿದ್ದಾರೆ. ಆಯ್ಕೆಯಾದ ಪ್ರತಿ ವಿದ್ಯಾರ್ಥಿಯ ಸಂಬಳ ಪ್ರತಿ ವರ್ಷಕ್ಕೆ 4.5 ಲಕ್ಷದಿಂದ 10 ಲಕ್ಷದವರೆಗೆ ಇದೆ. ಇದು ಮಹಾವಿದ್ಯಾಲಯದ ಪ್ರಯತ್ನದೊಂದಿಗೆ ವಿದ್ಯಾರ್ಥಿಗಳ ಶ್ರಮವೂ ಅಡಗಿದೆ. ವಿದ್ಯಾರ್ಥಿಗಳಿಗೆ ಅಗತ್ಯವಿರುವ ಎಲ್ಲಾ ಆಧುನಿಕ ಮೂಲ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಪರಿಣಿತಿ ಹೊಂದಿರುವ ಉಪನ್ಯಾಸಕರ ಮೂಲಕ ಶಿಕ್ಷಣ ನೀಡಲಾಗುತ್ತಿದೆ.

ಈ ಸಾಧನೆ ಮತ್ತು ಶ್ರಮದಿಂದಾಗಿ ಮಹಾವಿದ್ಯಾಲಯಕ್ಕೆ ಹಲವು ಪ್ರಶಸ್ತಿಗಳು ಲಭಿಸಿವೆ. ದುಬೈನಲ್ಲಿ ಏಷ್ಯನ್ ಎಜುಕೇಶನ್ ಲೀಡರ್‌ಶಿಪ್ ಅವಾರ್ಡ್, ಡೇಟಾ ಕ್ವೆಸ್ಟ್ ಟಿ-ಸ್ಕೂಲ್ ಅವಾರ್ಡ್, ಸಿಎಸ್‌ಆರ್ ಪತ್ರಿಕೆ ವತಿಯಿಂದ ಟಾಪ್ ಟಿ-ಸ್ಕೂಲ್ ಇನ್ ಇಂಡಿಯಾ ಮತ್ತು ಶೈಕ್ಷಣಿಕ ಮತ್ತು ಕೈಗಾರಿಕಾ ಕ್ಷೇತ್ರಗಳ ನಡುವೆ ಉತ್ತಮ ಭಾಂಧವ್ಯ ಹೊಂದಿರುವುದಕ್ಕಾಗಿ ಡಿಎನ್‌ಎ ಪತ್ರಿಕೆಯಿಂದ ಪ್ರಶಸ್ತಿ, ಜಪಾನಿನ ಅಂತಾರಾಷ್ಟ್ರೀಯ ಕಾರ್ಪೋರೇಶನ್ ಪ್ರಶಸ್ತಿ ಬಂದಿದೆ ಎಂದರು. ಉದಯ ಕಾಲಕುಂದ್ರಿಕರ ಉಪಸ್ಥಿತರಿದ್ದರು.

# Library & Information Centre

**Prajavani 05-05-2016**

## ಎಂ.ಟೆಕ್ ಕೋರ್ಸ್ ಆರಂಭ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪ್ರಸಕ್ತ ವರ್ಷದಿಂದ ಇಂಡಸ್ಟ್ರಿಯಲ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಹಾಗೂ ಅಟೊಮೊಟಿವ್ ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ ಸ್ನಾತಕೋತ್ತರ ಕೋರ್ಸ್ (ಎಂ.ಟೆಕ್) ಆರಂಭಿಸಲಾಗುವುದು ಎಂದು ಕೆಎಲ್‌ಎಸ್ ಸಂಸ್ಥೆಯ ಗೋಗಟೆ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಆನಂದ ದೇಶಪಾಂಡೆ ಹೇಳಿದರು.

ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಕಾಲೇಜಿಗೆ ಸ್ವಾಯತ್ತತೆ ದೊರೆತ ನಂತರ ಉದ್ಯಮಿಗಳು, ಹಲವು ಕಂಪೆನಿಗಳ ಸಹಕಾರದೊಂದಿಗೆ ಎಂಜಿನಿಯರಿಂಗ್ ಪಠ್ಯಕ್ರಮವನ್ನು ಸಿದ್ಧಪಡಿಸಲಾಗುತ್ತಿದೆ. ಮಾರುಕಟ್ಟೆಯ ಅಗತ್ಯಕ್ಕೆ ತಕ್ಕಂತೆ ಪಠ್ಯಕ್ರಮವನ್ನು ತಯಾರಿಸಲಾಗುತ್ತಿದೆ. ಅಲ್ಲದೇ, ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಾಯೋಗಿಕ ಪಾಠ ಹೇಳಿಕೊಡಲಾಗುತ್ತಿದೆ ಎಂದರು.

ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ), ಬೆಳಗಾವಿಯ ಫೌಂಡ್ರಿ ಕ್ಲಸ್ಟರ್ ಹಾಗೂ ಜಪಾನಿನ ಇಂಟರ್‌ನ್ಯಾಷನಲ್ ಕೋ-ಆಪ್‌ರೇಷನ್ ಅಸೋಸಿಯೇಷನ್ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಕಾಲೇಜಿನಲ್ಲಿ ಅಂತಿಮ ವರ್ಷದ ಎಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿರುವ ಸುಮಾರು 755ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ವಿವಿಧ ಕಂಪೆನಿಗಳು ನೇಮಕಾತಿ ಮಾಡಿಕೊಂಡಿವೆ ಎಂದರು.

**ಸ್ವತಂತ್ರ ಪಠ್ಯಕ್ರಮ:** ಕಳೆದ ವರ್ಷ ಕಾಲೇಜಿಗೆ ಸ್ವಾಯತ್ತತೆ ದೊರೆತ ನಂತರ ಪಠ್ಯಕ್ರಮವನ್ನು ನಾವೇ ಸಿದ್ಧಪಡಿಸಿಕೊಳ್ಳುತ್ತಿದ್ದೇವೆ.

ಉದ್ಯಮದ ಬೇಕು-ಬೇಡಿಕೆಗಳಿಗೆ ತಕ್ಕಂತೆ ಪಠ್ಯಕ್ರಮವನ್ನು ಪರಿಷ್ಕರಿಸುತ್ತಿದ್ದೇವೆ. ಇದಕ್ಕೆ ವಿದ್ಯಾರ್ಥಿಗಳು, ಉದ್ಯಮಗಳಿಂದ ಉತ್ತಮ ಸ್ಪಂದನೆ ದೊರೆತಿದೆ ಎಂದು ಜಿಐಟಿ ಆಡಳಿತ ಮಂಡಳಿ ಅಧ್ಯಕ್ಷ ಯು.ಎನ್. ಕಲ್ಕುಂದ್ರಿಕರ್ ತಿಳಿಸಿದರು.

# Library & Information Centre

**Deccan Herald 05-05-2016**

# Autonomy has helped Gogte show better results: Principal

**BELAGAVI, DHNS:** Automomous status and continuous evaluation process has helped improved KLS Gogte Institute of Technology's (GIT) student's performance, as seen in the results of two semesters during academic year 2015-16, according to Principal A S Deshpande.

Briefing reporters on Wednesday, he said autonomy has given greater freedom for revamping syllabus every year.

Continuous internal evaluation of students has help improve performance of students which wasn't possible with university system.

**Indian Express 05-05-2016**

# GIT Got 755 Students Placed in 2015-16 for ₹4.5L to ₹10L

**Belagavi:** KLS Gogte Institute of Technology (GIT) of Belagavi has achieved a record of providing over 755 candidate placement in 2015-16.

Principal A S Deshpande told reporters here on Wednesday that the average salary of the students ranges from ₹4.50 lakh to ₹10 lakh plus per annum. He said GIT prepares the students with extensive training on aptitude and technical abilities right from the second year.

Extra curricular activities like Aura and Avalanche add to the team work ability. Students also undergo a special certification course in English through Cambridge and other professional organisations.

Deshpande said that GIT spends a lot in bringing out the best in the students. In 2015-16, GIT has received various awards like Asian Education Leadership award at Dubai, Data Quest T-school award, Top T-school in India by Competition Success Review and award by DNA for excellence in accademics and industry interface, he said.

Deshpande informed that GIT will commence two new MTech programmes -- Industrial Engineering and Management and Automotive Electronics.

U N Kalkundrikar, Chairman, GIT also spoke. —ENS

# LIBRARY & INFORMATION CENTRE

**TarunBharat 05-05-2016**

# जीआयटीच्या ७५० विद्यार्थ्यांना नामवंत कंपन्यांत नोकरीच्या संधी

प्रतिनिधी
बेळगाव

केएलएस संचालित जीआयटी कॉलेजने यंदा प्लेसमेंटच्या बाबतीत मोठा विक्रम केला आहे. यंदा तब्बल ७५० विद्यार्थ्यांना नामवंत कंपन्यांत नोकरीच्या संधी उपलब्ध झाल्या असून प्रत्येकाला सरासरी वार्षिक ४.५ लाखाचे पॅकेज उपलब्ध झाले आहे. ही बाब कॉलेजच्या बाबतीत गौरवास्पद ठरली आहे.

बुधवारी पत्रकार परिषदेत ही माहिती देण्यात आली. प्राचार्य डॉ. ए. एस. देशपांडे व कॉलेज व्यवस्थापन मंडळाचे चेअरमन यु. एन. कालकुंद्रीकर उपस्थित होते. बी. ई. अभ्यासक्रमासाठी दाखल होणाऱ्या विद्यार्थ्यांना दुसऱ्या वर्षापासूनच व्यक्तिमत्त्व विकास व इंग्रजी संभाषणाचे प्रशिक्षण देण्यात येते. यामुळेच हे यश प्राप्त झाले असून नामवंत कंपन्यांनी विद्यार्थ्यांच्या कलागुणांचे विशेष कौतुक केले आहे.



बेळगाव : माहिती देताना प्राचार्य डॉ. ए. एस. देशपांडे व यु. एन. कालकुंद्रीकर आदी.

२०१५-१६ या वर्षात महाविद्यालयाने विविध पुरस्कार मिळविले आहेत. विद्यार्थी समूहांनी राष्ट्रीय व आंतरराष्ट्रीय चर्चासत्रांमध्ये पारितोषिके मिळविली आहेत. नुकतेच सीआयआय, बीएफसी व जपानी इंटरनॅशनल को-ऑपरेशन असोसिएशनच्या संयुक्त विद्यमाने नवे अभ्यासक्रम सुरू करण्यात आले आहेत, अशी माहितीही यावेळी देण्यात आली.

मागील शैक्षणिक वर्षातील यशाची टक्केवारी शंभर टक्क्यांपर्यंत जाऊन पोहोचली आहे. विद्यापीठीय स्तरावरील नामवंत महाविद्यालयांमध्ये जीआयटी अव्वल स्थानावर जाऊन पोहोचले आहे. यामुळेच व्हीटीयूने कॉलेजला स्वायत्त दर्जा दिला आहे, ही अभिमानाची बाब असल्याचेही यावेळी सांगण्यात आले.